ಒ.ಎಸ್. ನಂ.135/2019
ಡಿಡಬ್ಲು-1

ದಿನಾಂಕ 21.11.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ವಾಟಿ ಸವಾಲುಃ ವಾದಿ ಪರ ವಕೀಲರಿಂದ**

ನಿಡಿ-1 ಮತ್ತು 2 ವಾದಿ ಬರೆದುಕೊಟ್ಟಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ವಾದಿಯ ನಡುವೆ ಸಾಲದ ವ್ಯವಹಾರ ಆಗಿಲ್ಲ ಆದರೆ ಖರೀದಿ ಪ್ರತದ ವ್ಯವಹಾರ ಆಗಿರುತ್ತದೆ ಆದ್ದರಿಂದ ನಿಡಿ-1 ಮತ್ತು 2 ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ವಾದಿಯ ನಡುವೆ ಹೊಲದ ಖರೀದಿ ವ್ಯವಹಾರವಾಗಿದ್ದರಿಂದ ನಾನು ಕಬ್ಜಾ ರಹಿತ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಲದ ಭದ್ರತೆಗಾಗಿ ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಖರೀದಿ ಪತ್ರ ಬರೆದುಕೊಡುವ ಮುಂಚೆಯಾಗಿಲಿ ಅಥವಾ ನಂತರವಾಗಲಿ ನಾನು ದಾವಾ ಜಮೀನನ್ನು ಬೇರೆಯವರಿಗೆ ಅಡಮಾನ ಇಟ್ಟಿಲ್ಲ.

ನಾನು ಪ್ರತಿವಾದ ಪತ್ರದಲ್ಲಿ ಬರೆದ ವಿಷಯಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ನನ್ನ ಪ್ರತಿವಾದ ಪುಟ ನಂ.3 ಖಂಡಿಕೆ ನಂ.1 ರಲ್ಲಿ ಶರಣಪ್ಪ ತಂದೆ ಬನಶಂಕರಪ್ಪ ಅಂಗಡಿ ಮತ್ತು ಅಯ್ಯಪ್ಪ ತಂದೆ ಶರಣಪ್ಪ ನಾಟಿಕಾರ ಇವರ ಮುಂದೆ ರೂ.1,55,000/- ಬಡ್ಡಿ ಕೊಡಲು SBI account ನಿಂದ ರೂ.1,00,000/- ಮತ್ತು ಮತ್ತೊಂದು ಸಲ ರೂ.55,000/- ತೆಗೆದು ವಾದಿಗೆ ಕೊಟ್ಟಿರುತ್ತೇನೆಂದು ಮತ್ತು ವಾದಿ ರಸೀದಿ ನೀಡಿರುತ್ತಾನೆಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಪುಟ ಸಂ.2 ರಲ್ಲಿ ಖಾಂಡಿಕೆ ನಂ.3 ರ 10ನೆ ಸಾಲಿನಲ್ಲಿ The plaintiff got typed that he advanced load of Rs.3,80,00/- to the defendant for a period of 1-year from 23.01.2017 to 23.01.2018 with a condition that if the defendant failed to pay Rs.3,80,000/- within a year for which the land had already been mortgaged ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿ ನಾನು ಬರೆಸಿಲ್ಲ ಆದರೆ ನನ್ನ ವಕೀಲರು ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಹಾಗೂ ವಾದಿಯ ನಡುವೆ ಒಂದೇ ಕಾಗದ ಪತ್ರವಾಗಿದೆ. ದಿನಾಂಕ 20.06.2018 ರಂದು ವಾದಿ ಸಾಲದ ರೂ.4,00,000/- ನನಗೆ ಕೊಡು ಎಂದು ಕೇಳಿರುತ್ತಾನೆ ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 20.01.2017 ರಂದು ಜಮೀನಿನ ಮಾರಾಟ ಖರೀದಿ ಕರಾರು ಪತ್ರವಾಗಿರುತ್ತದೆ ಎಂದರೆ ನಿಜ. ದಿನಾಂಕ 04.07.2018 ನಾನು ವಾದಿಗೆ ರೂ.4,00,000/- ಕೊಟ್ಟ ಬಗ್ಗೆ ನಾನು ಯಾವುದೆ ನೊಂದಾಯಿತ ದಾಖಲೆಗಳನ್ನು ಮಾಡಿರುವುದಿಲ್ಲ. ವಾದಿ ನನಗೆ ಕಾನೂನು ಬದ್ದ ನೋಟಿಸು ನೀಡಿದಾಗ ಅದಕ್ಕೆ ನಾನು ಪ್ರತ್ಯುತ್ತರ ನೀಡಿಲ್ಲ ಎಂದರೆ ಸರಿ. ನಾನು ಬರೆದುಕೊಟ್ಟ ಖರೀದಿ ಪತ್ರದ ಪ್ರಕಾರ ನಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ಹಣದ ಭದತ್ರೆಗಾಗಿ ಬರೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಖರೀದಿ ಪತ್ರದ ಪ್ರಕಾರ ನಡೆದುಕೊಳ್ಳದ ಕಾರಣ ವಾದಿ ನನ್ನ ಮೇಲೆ ದಾವೆ ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ಖರೀದಿ ವ್ಯವಹಾರವು ಒಟ್ಟು ರೂ.4,50,000/- ಕ್ಕೆ ಆಗಿದ್ದು ಈಗಲೂ ಸಹ ವಾದಿ ಇನ್ನುಳಿದ ಬಾಕಿ ಹಣ ರೂ.50,000/- ಕೊಡಲು ಸಿದ್ದನಿದ್ದಾನೆ ಮತ್ತು ನೊಂದಣೆ ಖರ್ಚು ವೆಚ್ಚ ಸಹ ನೀಡಲೂ ಸಿದ್ದನಿದ್ದಾನೆ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ಸಾಕ್ಷಿದಾರರಾದ ಅಯ್ಯಪ್ಪ ನಾಟಿಕಾರ ಈತನು ವಾದಿಯ ವಿರುದ್ದ ತನ್ನ ತಂಗಿಯ ಮುಖಾಂತರ ಪಾಲು ವಾಟ್ನಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ನಂ.63/2024 ಎಂದರೆ ನನಗೆ ಗೊತ್ತಿಲ್ಲ. ನಾನು, ಅಯ್ಯಪ್ಪ, ಶರಣಪ್ಪ, ಬನಶಂಕ್ರೆಪ್ಪ ಎಲ್ಲರೂ ಶಾಮೀಲಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ವಾದಿಯ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಹಾಗೂ ನನ್ನ ಸಹೋದರರ ನಡುವೆ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದೆ ಎಂದರೆ ನಿಜ. ನನಗೆ ಸೇರಿದ ಎಲ್ಲಾ ಜಮೀನುಗಳು ಬೀಳು ಹಾಕಿರುತ್ತೇವೆ ಎಂದರೆ ನಿಜ. ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಸಹೋದರರ ನಡುವೆ ಕ್ರಿಮಿನಲ್ ಪ್ರಕರಣಗಳು ಚಾಲ್ತಿಯಲ್ಲಿವೆ ಎಂದರೆ ನಿಜ. ಖರೀದಿ ಪತ್ರದಲ್ಲಿರುವ ಸಾಕ್ಷಿದಾರನಾದ ಶರಣಪ್ಪ ತಂದೆ ಬನಶಂಕ್ರೆಪ್ಪ ಹಾಗೂ ಆತನ ಸಹೋದರರ ನಡುವೆ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದೆ ಎಂದರೆ ನಿಜ. ನಾನು, ಅಯ್ಯಪ್ಪ, ಶರಣಪ್ಪ, ಬನಶಂಕ್ರೆಪ್ಪ ಎಲ್ಲರೂ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರದಲ್ಲಿ ಸಲ್ಲಿಸಿ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ